ನಾನು ಮೌನವಾಗಿದ್ದೆ.

‘ಇದರಿಂದ ನಿನಗೆ ಕೆಟ್ಟ ಹೆಸರು ಬರ್ತಿದೆ. ನೀನು ರಿತಿಕ್‌ನನ್ನು ಬುಟ್ಟಿಗೆ ಹಾಕಿಕೊಂಡಿದ್ದೀಯ, ನೀನು ಲೂಸ್ ಕ್ಯಾರೆಕ್ಟರ್ ಹೆಣ್ಣು, ಅದಕ್ಕೇ ರಿತಿಕ್‌ನ ವೇಶ್ಯೆಯಾಗಿದ್ದೀಯ ಎಂದು ಜನ ಹೇಳುತ್ತಿದ್ದಾರೆ. ನೋಡು, ನಾನು ಗಾಳಿ ಮಾತನ್ನು ನಂಬಲ್ಲ. ಆದರೆ ಇಂದು ನಾನು ಇಲ್ಲಿಗೆ ಬಂದು, ನೀನು ರಿತಿಕ್‌ನ ಜೊತೆಗಿರುವುದನ್ನ ನನ್ನ ಕಣ್ಣಾರೆ ನೋಡಿದೆ. ರಿತಿಕ್ ನಿನ್ನೊಂದಿಗೆ ನಿನ್ನಿಚ್ಛೆಯಂತೆ ಇದ್ದಾನೆ ಎಂದೂ ಹೇಳಬಹುದು. ಆದರೆ ಇದು ಸರಿಯಲ್ಲ ಅಂತ ಮಾತ್ರ ನನಗೆ ತಿಳಿದಿದೆ. ನೀವಿಬ್ಬರು ಜೊತೆಯಲ್ಲಿರಲು ಬಯಸಿರುವಾಗ, ನೀವಿಬ್ಬರು ಮದುವೆಯಾಗಿ ಜೊತೆಯಲ್ಲಿರಿ, ಇದು ಒಳ್ಳೆಯದು’, ರಿತಿಕ್ ತಂದೆ ಮತ್ತೆ ನನಗೆ ತಿಳಿಯಪಡಿಸಿದರು. ನಾನು ಅವರ ಮಾತು ಕೇಳಿ ಮುಂದಕ್ಕೆ ಮಾತನಾಡದಾದೆ.

‘ನಾನು ಲೂಸ್ ಕ್ಯಾರೆಕ್ಟರ್ ಹೆಣ್ಣಲ್ಲ, ನಾನ್ಯಾವುದೇ ತಪ್ಪು ಕೆಲಸವನ್ನು ಸಹ ಮಾಡುತ್ತಿಲ್ಲ. ರಿತಿಕ್ ಖುದ್ದು ನನ್ನೊಂದಿಗಿರುವ ಆಸೆಯನ್ನು ವ್ಯಕ್ತಪಡಿಸಿದ್ದ. ನಾವು ತಪ್ಪು ಮಾಡುತ್ತಿದ್ದೇವೆ ಎಂದು ನನಗೆ ಅನ್ನಿಸಲ್ಲ’, ನಾನು ತುಂಬಾ ತಾಳ್ಮೆಯಿಂದ ಹೇಳಿದೆ.

‘ನಿನಗಿನ್ನೂ ಅರ್ಥವಾಗುತ್ತಿಲ್ಲ, ನೀನಿರುವ ಸಮಾಜದಲ್ಲಿ ಅದರದೇ ಆದ ಕೆಲವು ನಿಯಮ ಕಾನೂನುಗಳಿರುತ್ತವೆ, ನಾವು ಆ ನಿಯಮಗಳನ್ನು ಒಪ್ಪಬೇಕಾಗುತ್ತದೆ. ವಿವಾಹದಂಥ ನಿಯಮಗಳು ಸಂಬಂಧಗಳನ್ನು ಸುರಕ್ಷಿತವಾಗಿಡುತ್ತವೆ’, ರಿತಿಕ್ ತಂದೆ ಹೇಳಿದರು.

‘ಸುರಕ್ಷಿತ! ಮೈ ಫುಟ್! ಈಚಿನ ದಿನಗಳಲ್ಲಿ ನೂರಾರು ವಿಚ್ಛೇದನಗಳು ನಡೆಯುತ್ತಿವೆ, ಗಂಡ ಹೆಂಡತಿ ಒಬ್ಬರಿಗೊಬ್ಬರು ಮೋಸವೆಸಗುತ್ತಾರೆ. ಆದರೆ ನೀವು, ವಿವಾಹ ಪಾರಸ್ಪರಿಕ ಸಂಬಂಧಗಳನ್ನು ಸುರಕ್ಷಿತವಾಗಿಡುತ್ತದೆ ಎಂದು ಹೇಳುತ್ತೀರ. ನಾನು ಒಪ್ಪಲ್ಲ’, ರಿತಿಕ್ ಸಿಟ್ಟನ್ನು ವ್ಯಕ್ತಪಡಿಸಿದ.

‘ನೋಡಿ, ನಿಮ್ಮಿಬ್ಬರಿಗೆ ತಿಳಿ ಹೇಳುವುದು ನನ್ನ ಕರ್ತವ್ಯವಾಗಿತ್ತು; ಈಗ ತಿಳಿಯುವುದು, ಬಿಡುವುದು ನಿಮ್ಮಿಬ್ಬರಿಗೆ ಬಿಟ್ಟದ್ದು’, ರಿತಿಕ್ ತಂದೆ ಸೋಲು ಒಪ್ಪಿಕೊಳ್ಳುತ್ತಾ ಹೇಳಿದರು.

‘ನಾವು ಯೋಚಿಸಿಯೇ ಈ ತೀರ್ಮಾನಕ್ಕೆ ಬಂದಿದ್ದೇವೆ. ನಾವು ಒಬ್ಬರನ್ನೊಬ್ಬರು ಇಷ್ಟಪಡುತ್ತೇವೆ, ಒಟ್ಟಿಗೆ ಇರಲು ಬಯಸುತ್ತೇವೆ, ಒಟ್ಟಿಗೆಯೂ ಇದ್ದೇವೆ, ನಮಗಿಷ್ಟೇ ಸಾಕು’, ರಿತಿಕ್ ತನ್ನ ತಂದೆಯೊಂದಿಗೆ ವಾದ ಮಾಡುತ್ತಾ ಹೇಳಿದ.

ನನಗೆ ಹೀಗೆ ಅವರೊಂದಿಗೆ ಚರ್ಚಿಸುವುದು ಇಷ್ಟವಾಗುತ್ತಿರಲಿಲ್ಲ, ಆದರೆ ಇದು ನಮ್ಮ ತೀರ್ಮಾನ ಮತ್ತು ನಮ್ಮ ಜೀವನದ ಪ್ರಶ್ನೆಯಾಗಿತ್ತು, ನಾವೇ ನಮ್ಮ ಪರವಾಗಿ ಮಾತನಾಡದಿದ್ದರೆ, ಬೇರಾರು ಹೇಳುತ್ತಿದ್ದರು?

